**ಪ್ರಧಾನ ಹಿರಿಯ ದಿವಾಣಿ ನ್ಯಾಯಧೀಶರು, ಜೆ.ಎಂ.ಎಫ್.ಸಿ./ಎಂ.ಎ.ಸಿ.ಟಿ. ಇವರ ನ್ಯಾಯಾಲಯ, ಮುಧೋಳ**
**ಇಂದು ದಿನಾಂಕ 06.03.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಎದುರುದಾರ ಪರ ವಕೀಲರಾದ ಶ್ರೀ ಜೆ ಬಿ ಎನ್ ರವರ ಪರವಾಗಿಃ**

ನಾನು 7 ನೇ ತರಗತಿಯವರೆಗೆ ಶಾಲೆ ಕಲಿತಿರುವೆನು. ನಾನು ಒಕ್ಕಲತನ ಉದ್ಯೋಗ ಮಾಡುತ್ತಿರುವೆನು. ಅರ್ಜಿದಾರ 2 ಮತ್ತು 3 ರವರು ಶಾಲೆ ಕಲಿತಿರುವುದಿಲ್ಲ, ಅವರು ಸಹ ಒಕ್ಕಲತನ ಉದ್ಯೋಗ ಮಾಡುತ್ತಿರುವರು. ಅರ್ಜಿದಾರ 4 ರಿಂದ 8 ರವರು ವಿವಾಹವಾಗಿದ್ದು ಅವರು ಗಂಡನ ಮನೆಯಲ್ಲಿ ವಾಸವಾಗಿರುತ್ತಾರೆ ಎಂದರೆ ಸರಿ. ನನ್ನ ತಂದೆಯ ಜೀವಿತ ಕಾಲದಲ್ಲಿ ಜಮೀನಿನಲ್ಲಿ ಕೆಲಸ ಮಾಡುತ್ತಿರಲಿಲ್ಲ ನಾವು ಮಾಡುತ್ತಿದ್ದೇವು ಎಂದರೆ ಸರಿಯಲ್ಲ. ಈಗಲೂ ಸಹ ನಾವೇಕೆಲಸ ಮಾಡುತ್ತಿರುವೆವು ಎಂದರೆ ಸರಿ. ನಮ್ಮ ತಂದೆಯ ಆದಾಯದ ಮೇಲೆ ನಾವು ಅವಲಂಬಿತರಾಗಿರಲಿಲ್ಲ ಅಂತ ಸೂಚಿಸುವುದು ಸರಿಯಲ್ಲ. ನಾನು ಮತ್ತು ಉಳಿದ ಅರ್ಜಿದಾರರೂ ಸಹ ನನ್ನ ತಂದೆಯ ಆದಾಯದ ಮೇಲೆ ಅವಲಂಬಿತರಾಗಿರಲಿಲ್ಲ ಅಂತ ಸೂಚಿಸುವುದು ಎಂದರೆ ಸರಿಯಲ್ಲ.

2. ಈ ಅಪಘಾತ ದಿಃ 07.07.2023 ರಂದು ಆಗಿರುವುದು. ಈ ಅಪಘಾತವನ್ನು 1 ನೇ ಎದುರುದಾರ ಮಾಡಿರುವನು. ಆತನ ವಾಹನ ನೊಂದಣಿ ಸಂಖ್ಯೆ ಕೆಎ-48/ಡಬ್ಲ್ಯೂ-3648. ಈ ಅಪಘಾತವನ್ನು ನಾನು ಪ್ರತ್ಯೇಕ್ಷವಾಗಿ ನೋಡಿರುವುದಿಲ್ಲ ಎಂದರೆ ಸರಿ. ಈ ಅಪಘಾತ ನೋಡಿರುವ ಸಂಗಪ್ಪ ಎಂಬುವವರು ನಮಗೆ ಹೇಳಿರುವರು. ಈ ಅಪಘಾತದ ಬಗ್ಗೆ ಪೊಲೀಸ್ ಠಾಣೆಗೆ ಮಾಹಿತಿ ನೀಡಿ ದೂರನ್ನು ನೀಡಿರುವನು. ನನಗೂ ಮತ್ತು ನಮ್ಮ ಉಳಿದ ಸಹೋದರರಿಗೆ ಈ ದೂರು ನೀಡಲು ಯಾವುದೇ ತೊಂದರೆ ಇರಲಿಲ್ಲ ಎಂದರೆ ಸರಿ. ಈ ಅಪಘಾತವಾದಾಗ ನನ್ನ ತಂದೆಗೆ ಸುಮಾರು 70 ವರ್ಷಕ್ಕಿಂತ ಹೆಚ್ಚಿನ ವಯಸ್ಸು ಆಗಿತ್ತು ಎಂದರೆ ಸರಿಯಲ್ಲ. ಆತ ವಯಸಹಜ ಕಾಯಿಲೆ ಬಳಲುತ್ತಿದ್ದ ಎಂದರೆ ಸರಿಯಲ್ಲ. ಆತನಿಗೆ ಸರಿಯಾಗಿ ಕಣ್ಣು ಕಾಣುತಿರಲಿಲ್ಲ ಮತ್ತು ನಡೆಯಲು ಬರುತ್ತಿರಲಿಲ್ಲ ಎಂದರೆ ಸರಿಯಲ್ಲ. ಆತ ಇನ್ನೊಬ್ಬರ ಸಹಾಯ ಇಲ್ಲದೆ ತಿರುಗಾಡಲು ಬರುತ್ತಿರಲಿಲ್ಲ ಎಂದರೆ ಸರಿಯಲ್ಲ. ಈ ಅಪಘಾತ ಎದುರುದಾರನ ನಿರ್ಲಕ್ಷತೆಯಿಂದ ಆಗಿರುವುದಾಗಿ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆಗೆ ವಯಸ್ಸಾಗಿರುವುದರಿಂದ ಆತ ಆಯ ತಪ್ಪಿ ಬಿದ್ದು ಗಾಯಗೊಂಡಿರುವನು ಅಂತ ಸೂಚಿಸುವುದು ಸರಿಯಲ್ಲ. ಈ ಅಪಘಾತ ಎದುರುದಾರ ಮಾಡಿರುವುದಾಗಿ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಅಪಘಾತಕಕ್ಕ ಸಂಬಂಧಪಟ್ಟಂತೆ ಎದುರುದಾರನ ಯಾವುದೇ ತಪ್ಪು ಇದರೇ ಇದ್ದರೂ ಸಹಿತ ಆತನ ವಿರುದ್ದ ಈ

ಸುಳ್ಳು ದೂರು ದಾಖಲು ಮಾಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

3. ಅಪಘಾತವಾದ ಸ್ಥಳ ಜನದಟ್ಟನೆಯ ಸ್ಥಳ ಎಂದರೆ ಸರಿ. ಅಲ್ಲಿ ಸಾಕಷ್ಟು ವಾಹನಗಳ ಸಂಚಾರ ಇರುವುದು ಎಂದರೆ ಸರಿ.ಅಲ್ಲಿ ಎಲ್ಲಾ ವಾಹನಗಳು ನಿಧಾನವಾಗಿ ಹೋಗುವುದು ಬರುವುದು ಮಾಡುತ್ತವೆ ಎಂದರೆ ಸರಿಯಲ್ಲ. ಎದುರುದಾರ ತನ್ನ ವಾಹವನ್ನು ನಿರ್ಲಕ್ಷತೆಯಿಂದ ಚಾಲಾಯಿಸಿಕೊಂಡು ಬಂದು ಈ ಅಪಘಾತ ಮಾಡಿರುವುದಾಗಿ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಸಾಕ್ಷಿಯ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಬರೆಸಿರುವರ ಎಲ್ಲಾ ಸಂಗತಿಗಳು ನಿಜವಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆಯ ಆದಾಯದ ಬಗ್ಗೆ ಮತ್ತು ಅವರ ವಯಸ್ಸಿನ ಬಗ್ಗೆ ಯಾವುದೇ ದಾಖಲೆಯನ್ನು ಹಾಜರು ಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಪರಿಹಾರ ಹಣ ಪಡೆಯುವ ಸಲುವಾಗಿ ಈ ಸುಳ್ಳು ಅರ್ಜಿ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಅರ್ಜಿಯಲ್ಲಿ ಕೋರಿರುವಂತೆ ಪರಿಹಾರ ಹಣ ನೀಡಲು ಎದುರುದಾರರು ಬಾದ್ಯಸ್ಥರಾಗಿರುವುದಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ : ಇರುವುದಿಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು. )

ಓ . ಹೇ. ಕೆ . ಸರಿ ಅದೆ .

ಸಾಕ್ಷಿಯ ಸಹಿ

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು/
ಜೆ.ಎಂ.ಎಫ್.ಸಿ.,/ಎಂ ಎ ಸಿ ಟಿ., ಮುಧೋಳ